# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 127 | Pages. 2 | Date: 20-03-2025, THURSDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 127 - ಪುಟಗಳು : 2 - 20 ಮಾರ್ಚ್ 2025 ಗುರುವಾರ | Ph: 8762954248 | ದರ : ₹1


# ಪಾರದರ್ಶಕ ಚುನಾವಣೆಗೆ ಎಲ್ಲರ ಸಹಕಾರ ಅಗತ್ಯ

## ಜಿಲ್ಲೆಯಲ್ಲಿದ್ದಾರೆ 15,37,888 ಮತದಾರರು | ಆಕ್ಷೇಪಣೆಗಳಿಗೆ ಡಿಸಿ ಆಹ್ವಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮತದಾರರ ಪಟ್ಟಿ, ಮತಗಟ್ಟೆ, ಚುನಾವಣೆ ಹಾಗೂ ಕಾನೂನುಗಳ ಕುರಿತು ಯಾವುದೇ ದೂರು, ಆಕ್ಷೇಪಣೆ, ಸಲಹೆಗಳಿದ್ದರೆ ನೀಡಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಸಿ. ಸತ್ಯಭಾಮ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗಿನ ಸಭೆಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಪಾರದರ್ಶಕ ಚುನಾವಣೆ ನಡೆಸಲಾಗುತ್ತಿದೆ. ಯಾವುದೇ ದೂರು, ಸಲಹೆ, ಸೂಚನೆಗಳನ್ನು ನೀಡಿದಲ್ಲಿ ಚುನಾವಣಾ ಆಯೋಗದ ಗಮನಕ್ಕೆ ತರಲಾಗುವುದು. ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಪಕ್ಷದ ವತಿಯಿಂದ ಬೂತ್ ಮಟ್ಟದ ಏಜೆಂಟ್‌ಗಳನ್ನು ನಿಯೋಜಿಸುವಂತೆ ತಿಳಿಸಿದರು.

ಪ್ರತಿ ಮತಗಟ್ಟೆಗೆ ಒಬ್ಬರಂತೆ ಬೂತ್ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತದೆ. ಬೂತ್ ಮಟ್ಟದ ಅಧಿಕಾರಿಗಳ ಕಾರ್ಯವನ್ನು ಮೇಲ್ವಿಚಾರಣೆ ಮಾಡಲು ಸಂಬಂಧಪಟ್ಟ ಗ್ರಾಮ ಆಡಳಿತ ಅಧಿಕಾರಿಗಳನ್ನು ಬೂತ್ ಮಟ್ಟದ ಅಧಿಕಾರಿಗಳ ಮೇಲ್ವಿಚಾರಕರನ್ನಾಗಿ ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ವಿಧಾನಸಭಾ, ಲೋಕಸಭಾ ಮತ್ತು ವಿಧಾನ ಪರಿಷತ್ ಚುನಾವಣೆಯನ್ನು ಮತ್ತು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ಕೈಬಿಡುವುದು ಮತ್ತು ತಿದ್ದುಪಡಿ, ವರ್ಗಾವಣೆ ಕುರಿತು ಚಾಲ್ತಿಯಲ್ಲಿರುವ ಪ್ರಜಾ ಪ್ರತಿನಿಧಿ ಕಾಯ್ದೆ



1950, ಪ್ರಜಾ ಪ್ರತಿನಿಧಿ ಕಾಯ್ದೆ 1951, ಮತದಾರರ ನೋಂದಣಿ ನಿಯಮಗಳು 1960, ಚುನಾವಣೆ ನಡೆಸುವ ನಿಯಮಗಳು 1961 ಮತ್ತು ಮತದಾರರ ಪಟ್ಟಿಯ ಕೈಪಿಡಿ ಅನ್ವಯ ಮಾಡಲಾಗುವುದು ಎಂದು ರಾಜಕೀಯ ಪಕ್ಷದ ಪ್ರತಿನಿಧಿಗಳಿಗೆ ತಿಳಿಸಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ನಿರಂತರ ಪರಿಷ್ಕರಣೆ ಹಾಗೂ ಪ್ರತಿ ವರ್ಷ ಅಕ್ಟೋಬರ್-ಡಿಸೆಂಬರ್‌ನಲ್ಲಿ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕೈಗೊಳ್ಳಲಾಗುವುದು. ನಿರಂತರ ಪರಿಷ್ಕರಣೆ ಅವಧಿಯಲ್ಲಿ ಮನೆ-ಮನೆ ಸಮೀಕ್ಷೆಯನ್ನು ಸಹ ನಡೆಸಲಾಗುವುದು ಎಂದು ತಿಳಿಸಿದರು.

ಮತದಾರರ ಪಟ್ಟಿ ಪರಿಷ್ಕರಣೆಯನ್ನು ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ ತಿಂಗಳ 1ನೇ ತಾರೀಖು ನಡೆಸಲಾಗುವುದು ಎಂದು ತಿಳಿಸಲಾಯಿತು. ಅಂತಿಮ ಮತದಾರರ ಪಟ್ಟಿಯನ್ನು 2025ರ ಜೂನ್ 1 ರಂದು ಪ್ರಕಟಿಸಲಾಗಿದೆ. ಅಂತಿಮ ಮತದಾರರ ಪಟ್ಟಿಯಂತೆ ಜಿಲ್ಲೆಯಲ್ಲಿ 7,63,676 ಪುರುಷರು, 7,74,175 ಮಹಿಳೆಯರು ಮತ್ತು ಇತರರು 37 ಸೇರಿ ಜಿಲ್ಲೆಯಲ್ಲಿ ಒಟ್ಟು 15,37,888 ಮತದಾರರಿದ್ದಾರೆ ಎಂದರು.

ಪ್ರಸ್ತುತ ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಲು ನಮೂನೆ-6ರಲ್ಲಿ, ಮರಣ, ಸ್ಥಳಾಂತರ, ಪುನರಾವರ್ತನೆ ಆಗಿದ್ದಲ್ಲಿ ಹೆಸರುಗಳನ್ನು ಕೈಬಿಡಲು ನಮೂನೆ-7ರಲ್ಲಿ, ಮತದಾರರ ಗುರುತಿನ ಚೀಟಿಯಲ್ಲಿ ನಮೂದುಗಳು ತಪ್ಪಾಗಿದ್ದಲ್ಲಿ ತಿದ್ದುಪಡಿಗಾಗಿ, ಹೆಸರು ವರ್ಗಾವಣೆಗಾಗಿ ನಮೂನೆ-8ರಲ್ಲಿ, ಅನಿವಾಸಿ ಭಾರತೀಯರು ಮತದಾರರು ಪಟ್ಟಿಗೆ ಹೆಸರು ಸೇರಿಸಲು ನಮೂನೆ-6ಎ ರಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ನಮೂನೆ-6, 6ಎ, 7 ಮತ್ತು 8ರ ಅರ್ಜಿಗಳನ್ನು ಭಾರತ ಚುನಾವಣಾ ಆಯೋಗವು ಅಭಿವೃದ್ಧಿ ಪಡಿಸಿರುವ ಮೊಬೈಲ್ ಅಪ್ಲಿಕೇಷನ್ ಮತದಾರರ ಸಹಾಯವಾಣಿ ಆಪ್ (VOTER HELPLINE App) ಹಾಗೂ https://voters.eci.gov.in/ /VOTERS' SERVICE PORTAL ಮೂಲಕ ಆನ್‌ಲೈನ್‌ನಲ್ಲಿ ನೇರವಾಗಿ ಸಲ್ಲಿಸಬಹುದಾಗಿದೆ ಎಂದರು.

ಆಯೋಗವು ಪ್ರತಿ 800 ರಿಂದ 1200 ಮತದಾರರಿಗೆ ಪ್ರತ್ಯೇಕ ಮತಗಟ್ಟೆಯನ್ನು ಸ್ಥಾಪಿಸುವುದು, ಮತದಾರರು ವಾಸಿಸುವ ಸ್ಥಳದಿಂದ ಮತಗಟ್ಟೆ ತಲುಪಲು ಗರಿಷ್ಠ 2 ಕಿ.ಮೀ. ಮೀರದಂತೆ ಇರುಬೇಕು ಎಂಬುದಾಗಿದ್ದು, ಪ್ರಸ್ತುತ ಜಿಲ್ಲೆಯಲ್ಲಿ 1968 ಮತಗಟ್ಟೆಗಳನ್ನು ಸ್ಥಾಪಿಸಲಾಗಿರುತ್ತದೆ. ಸ್ಥಾಪಿಸಲಾಗಿರುವ ಎಲ್ಲಾ ಮತಗಟ್ಟೆಗಳಲ್ಲಿ ಕನಿಷ್ಠವಾಗಿ ನೀಡಬೇಕಾದ ಮೂಲಭೂತ ಸೌಕರ್ಯಗಳನ್ನು (ಅಂತ್ಯಭಿಥ ಖಜ್ಞಿ ಜಿಙ್ಞಃ ಊಚ್ಟಜಿಜ್ಝಜಿರಿಜಿಥಿ) ಒದಗಿಸಲಾಗಿರುತ್ತದೆ. ಜಿಲ್ಲೆಯಲ್ಲಿ ಸ್ಥಾಪಿಸಿರುವ ಎಲ್ಲಾ ಮತಗಟ್ಟೆಗಳು ನೆಲ ಮಹಡಿಯಲ್ಲಿಯೇ ಇರುತ್ತವೆ. ನಗರ ಪ್ರದೇಶದಲ್ಲಿ ಹೆಚ್ಚಿನ ಜನ ಸಂದಣಿಯಾಗದೇ ಗುಂಪು ಮತಗಟ್ಟೆಗಳನ್ನು ವಿಂಗಡಿಸಲಾಗಿದ್ದು, ಮತದಾನ ಪ್ರಕ್ರಿಯೆಗೆ ತೊಂದರೆಯಾಗದಂತೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು, ಮುಂಜಾಗ್ರತಾ ಕ್ರಮಗಳ ಕೈಗೊಳ್ಳಲಾಗುವುದು ಎಂದರು.

ಮತದಾರರ ಪಟ್ಟಿಯನ್ನು ನಮೂದುಗಳ ಕುರಿತು ಮತದಾರರ ನೋಂದಣಾಧಿಕಾರಿಗಳ ಆದೇಶದ ವಿರುದ್ಧ ಜಿಲ್ಲಾಧಿಕಾರಿಗಳಿಗೆ ಪ್ರಜಾ ಪ್ರತಿನಿಧಿ ಕಾಯ್ದೆ 1950 ರ ಸೆಕ್ಷನ್ 24(a) ರಂತೆ ಮೊದಲನೇ ಮೇಲ್ಮನವಿಯನ್ನು ಸಲ್ಲಿಸಬಹುದಾಗಿದೆ.

ಸಭೆಯಲ್ಲಿ ಚುನಾವಣಾ ತಹಶೀಲ್ದಾರ್ ಪಿ.ಎಸ್. ಕುಂಬಾರ್ ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ಆಪರೇಷನ್ ವಿಕ್ರಾಂತ್ 2ನೇ ದಿನವೂ ವಿಫಲ

## ಅರಣ್ಯ ಇಲಾಖೆಗೆ ಚಳ್ಳೆಹಣ್ಣು ತಿನ್ನಿಸುತ್ತಿರುವ ಕಾಡಾನೆ | ಕಾರ್ಯಾಚರಣೆಗೆ ಭೀಮ ಅಡ್ಡಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ತಾಲೂಕಿನಲ್ಲಿ ಪುಂಡಾನೆ ವಿಕ್ರಾಂತ್‌ನನ್ನು ಸೆರೆ ಹಿಡಿಯಲು ನಡೆದ ಆಪರೇಷನ್ ವಿಕ್ರಾಂತ್ ಕಾರ್ಯಾಚರಣೆ ಸತತ ಎರಡನೇ ದಿನವೂ ವಿಫಲಗೊಂಡಿದೆ.

ಅರಣ್ಯ ಇಲಾಖೆಯ ತಂಡ ಬುಧವಾರ ಸತತ ಆರು ಗಂಟೆಗಳ ಕಾಲ ಶ್ರಮಿಸಿದರೂ, ವಿಕ್ರಾಂತ್ ಸೆರೆಗೆ ಸಿಗದೆ ತಪ್ಪಿಸಿಕೊಂಡಿದೆ. ಈ ಕಾರ್ಯಾಚರಣೆ ಸ್ಥಳಕ್ಕೆ ದೈತ್ಯ ಕಾಡಾನೆ ಭೀಮನ ಆಗಮನ ಹೊಸ ತೊಡಕು ತಂದಿದ್ದು, ಅರಣ್ಯ ಇಲಾಖೆಗೆ ಹಿನ್ನಡೆ ಉಂಟಾಗಿದೆ.

ಬುಧವಾರ ಮಧ್ಯಾಹ್ನದ ನಂತರ ಥರ್ಮಲ್ ಡ್ರೋನ್ ಬಳಸಿ ವಿಕ್ರಾಂತ್‌ನನ್ನು ಪತ್ತೆಹಚ್ಚಲು ಯತ್ನಿಸಿದ ಅರಣ್ಯ ಇಲಾಖೆ, ಅರವಳಿಕೆ ಚುಚ್ಚುಮದ್ದು ನೀಡಿ ಸೆರೆಹಿಡಿಯಲು ಮುಂದಾಗಿತ್ತು. ಆದರೆ, ಸ್ಥಳದಲ್ಲಿದ್ದ ಇತರ ಮೂರು ಕಾಡಾನೆಗಳ ಜತೆಗೆ ಭೀಮ ಎಂಬ ಕಾಡಾನೆಯ ಆಗಮನವು ಯೋಜನೆಗೆ ಅಡ್ಡಿಯಾಯಿತು.



### ಕಾರ್ಮಿಕರನ್ನು ಅಟ್ಟಾಡಿಸಿದ ಭೀಮ!

ತಾಲ್ಲೂಕಿನ ಬಕ್ರವಳ್ಳಿ ಗ್ರಾಮದಲ್ಲಿ ಕಾಡಾನೆ ಭೀಮ, ಕೂಲಿ ಕಾರ್ಮಿಕರನ್ನು ರಸ್ತೆಯಲ್ಲೇ ಅಟ್ಟಾಡಿಸಿದ ಆತಂಕಕಾರಿ ಘಟನೆ ನಡೆದಿದೆ.

ಕೆಲಸ ಮುಗಿಸಿ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದ ಅಸ್ಸಾಂ ಮೂಲದ ತೋಟ ಕಾರ್ಮಿಕರು ಸಾಗುತ್ತಿದ್ದ ರಸ್ತೆಗೆ ಬಂದು ನಿಂತ ಭೀಮ ಕಾಡಾನೆ ಅವರ ಬೆನ್ನು ಹತ್ತಿದೆ. ತಮ್ಮನ್ನು ಆನೆ ಅಟ್ಟಿಸಿಕೊಂಡು ಬಂದಿದ್ದನ್ನು ಕಂಡು ಪುರುಷರು, ಮಹಿಳೆಯರು ಹಾಗೂ ಮಕ್ಕಳು ಭಯಭೀತರಾಗಿ ಜೀವ ಕೈಯಲ್ಲಿ ಹಿಡಿದು ಓಡಿ ತಪ್ಪಿಸಿಕೊಂಡಿದ್ದಾರೆ.

ಓಡುವಾಗ ಒಬ್ಬ ತಂದೆ ತನ್ನ ಮಗುವನ್ನು ಎತ್ತಿಕೊಂಡು ಪ್ರಾಣ ರಕ್ಷಣೆಗಾಗಿ ಓಡಿದ ದೃಶ್ಯ ಹೃದಯ ಕಲಕುವಂತಿತ್ತು. ಕಾಡಾನೆ ಕಂಡು ಭಯಗೊಂಡ ಕಾರ್ಮಿಕರು ಓಡೋಡಿ ಹೋಗಿ ತಮ್ಮ ಜೀವ ಉಳಿಸಿಕೊಂಡಿದ್ದಾರೆ.



### ಆತಂಕಗೊಂಡ ಅರಣ್ಯ ಇಲಾಖೆ

ಭೀಮ ಸಾಕಾನೆಗಳನ್ನುಕಂಡರೆ ಕಾಳಗಕ್ಕೆ ಇಳಿಯುವ ಭೀತಿಯಿಂದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು. ಈ ಕಾರ್ಯಾಚರಣೆಯಲ್ಲಿ 200ಕ್ಕೂ ಹೆಚ್ಚು ಅರಣ್ಯ ಇಲಾಖೆ ಮತ್ತು ಪೊಲೀಸ್ ಸಿಬ್ಬಂದಿ ಜತೆಗೆ ಏಳು ಸಾಕಾನೆಗಳು ಭಾಗವಹಿಸಿದ್ದವು.

ಆದರೆ, ವಿಕ್ರಾಂತ್‌ನ ಚಾಕಚಕ್ಯತೆ ಮತ್ತು ಭೀಮನ ಆಗಮನದಿಂದ ಎರಡು ದಿನಗಳ ಶ್ರಮ ವ್ಯರ್ಥವಾಯಿತು. ವಿಕ್ರಾಂತ್ ನಮಗೆ ಚಳ್ಳೆಹಣ್ಣು ತಿನ್ನಿಸುತ್ತಿದೆ, ಎಂದು ಅರಣ್ಯ ಇಲಾಖೆಯ ಸಿಬ್ಬಂದಿಯೊಬ್ಬರು ಹೇಳಿದರು.

ಭೀಮನನ್ನು ದೂರ ಓಡಿಸಿ ವಿಕ್ರಾಂತ್‌ನನ್ನು ಸೆರೆಹಿಡಿಯಲು ಅರಣ್ಯ ಇಲಾಖೆ ತೀವ್ರ ಪ್ರಯತ್ನ ನಡೆಸುತ್ತಿದೆ. ಆದರೆ, ಸಾಕಾನೆಗಳು ಭೀಮನ ಭಯದಿಂದ ಬೆದರಿ ಓಡುವ ಸಾಧ್ಯತೆಯೂ ಇದ್ದು, ಕಾರ್ಯಾಚರಣೆಗೆ ಮತ್ತಷ್ಟು ಸವಾಲು ಎದುರಾಗಿದೆ. ಎರಡು ದಿನಗಳ ಕಾಲ ದಣಿದಿರುವ ಸಿಬ್ಬಂದಿ ಮತ್ತು ಸಾಕಾನೆಗಳಿಗೆ ಇದು ಹೊಸ ಪರೀಕ್ಷೆಯಾಗಿದೆ.

ಪ್ರಸ್ತುತ, ಅರಣ್ಯ ಇಲಾಖೆ ಭೀಮನನ್ನು ದೂರಕ್ಕೆ ಸರಿಸುವ ಸರ್ಕಸ್‌ನಲ್ಲಿ ತೊಡಗಿದ್ದು, ವಿಕ್ರಾಂತ್‌ನ ಸೆರೆಗಾಗಿ ಮತ್ತೊಂದು ತಂತ್ರ ರೂಪಿಸುತ್ತಿದೆ.

# ಕಾಳಿಂಗ ಸರ್ಪ ಕೊಂದು ಪ್ರಾಣಬಿಟ್ಟ ಶ್ವಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ತಾಲ್ಲೂಕಿನ ಕಟ್ಟಾಯ ಗ್ರಾಮದಲ್ಲಿ ಶ್ವಾನಗಳೆರಡು ಕಾಳಿಂಗ ಸರ್ಪದೊಂದಿಗೆ ಕಾದಾಡಿ, ಮಕ್ಕಳು ಹಾಗೂ ಕೂಲಿ ಕಾರ್ಮಿಕರನ್ನು ಕಾಪಾಡಿ ಶ್ವಾನವೊಂದು ಮೃತಪಟ್ಟಿದೆ.

ಗ್ರಾಮದ ಶಮಂತ್ ಎಂಬುವವರು ತಮ್ಮ ತೋಟದಲ್ಲಿ ಪಿಟ್ ಬುಲ್ ಹಾಗೂ ಡಾಬರ್ ಮನ್ ನಾಯಿಗಳನ್ನು ಸಾಕಿದ್ದಾರೆ. ಬಿಟ್‌ಬುಲ್ ಶ್ವಾನಕ್ಕೆ ಪ್ರೀತಿಯಿಂದ ಮಾಲೀಕ ಭೀಮ ಎಂದು ಹೆಸರಿಟ್ಟಿದ್ದರು. ಮಂಗಳವಾರ ತೋಟದಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾಗ, 12 ಅಡಿ ಉದ್ದದ ಬಿಳಿ ಬಣ್ಣದ ಕಾಳಿಂಗ ಸರ್ಪ ಮನೆ ಬಳಿ ಕಾಣಿಸಿಕೊಂಡಿದೆ. ಆಟವಾಡುತ್ತಿದ್ದ ಮಕ್ಕಳ ಬಳಿಗೆ ಬಂದ ಸರ್ಪ, ನಂತರ ತೆಂಗಿನ ಗರಿಯ ಕೆಳಗೆ ಅವಿತು ಕುಳಿತಿತ್ತು.



ಗಮನಿಸಿದ ಶ್ವಾನಗಳು ಏಕಾಏಕಿ ಕಾಳಿಂಗ ಸರ್ಪದ ಮೇಲೆ ಎರಗಿವೆ. ಮಾಲೀಕ ಕರೆದರೂ ಬಾರದೇ ಸುಮಾರು 15 ನಿಮಿಷಗಳಿಗೂ ಹೆಚ್ಚು ಹಾವಿನ ಜೊತೆಗೆ ಸೆಣಸಾಡಿವೆ. ಈ ವೇಳೆ ಪಿಟ್ ಬುಲ್ ನಾಯಿಯ ಮುಖಕ್ಕೆ ಹಾವು ಕಚ್ಚಿದೆ. ಆದರೂ ಹಟ ಬಿಡದ ಶ್ವಾನ ನಿರಂತರವಾಗಿ ಹಾವಿನೊಂದಿಗೆ ಸೆಣಸಾಡಿ 12 ಉದ್ದದ ಸರ್ಪವನ್ನು 10 ತುಂಡುಗಳಾಗಿ ಮಾಡಿ ಸಾಯಿಸಿವೆ. ಆದರೆ ವಿಷವೇರಿ ಬಿಟ್ ಬುಲ್ ಶ್ವಾನ ಪ್ರಾಣಬಿಟ್ಟಿದೆ. ಒಂದು ವೇಳೆ ಶ್ವಾನಗಳು ಬಾರದಿದ್ದರೆ, ಕೂಲಿ ಕಾರ್ಮಿಕರು ಅಥವಾ ಮಕ್ಕಳ ಮೇಲೆ ಕಾಳಿಂಗ ಸರ್ಪ ದಾಳಿ ಮಾಡುತಿತ್ತು. ಶ್ವಾನಗಳ ಸಮಯ ಪ್ರಜ್ಞೆಯಿಂದ ಸಂಭವಿಸಬಹುದಾದ ದುರಂತವೊಂದು ತಪ್ಪಿದಂತಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

# ರಸ್ತೆ ಪಾಲಾದ ಕಲ್ಲಂಗಡಿ ಹಣ್ಣು

ಕೊಣನೂರು: ಕುಶಾಲನಗರ-ಕೊಣನೂರು ಮಾರ್ಗಮಧ್ಯದ ಸಿದ್ದಾಪುರ ಗೇಟ್‌ನಲ್ಲಿ ಬುಧವಾರ ಗೂಡ್ಸ್ ವಾಹನದ ಆಕ್ಸೆಲ್ ತುಂಡಾಗಿ ಕಲ್ಲಂಗಡಿ ಹಣ್ಣುಗಳು ರಸ್ತೆ ಪಾಲಾದ ಘಟನೆ ನಡೆದಿದೆ. ರೈತರೊಬ್ಬರು ಗೂಡ್ಸ್ ವಾಹನದ ಮೂಲಕ ವ್ಯಾಪಾರ ಮಾಡಲು ಸಾವಿರಾರು ಕಲ್ಲಂಗಡಿ ಹಣ್ಣುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಆಕಸ್ಮಿಕವಾಗಿ ನಡೆದ ಘಟನೆಯಿಂದ ನೂರಾರು ಕಲ್ಲಂಗಡಿ ಹಣ್ಣು ಒಡೆದು ಮಣ್ಣು ಪಾಲಾದವು. ರೈತರಿಗೆ ಅಪಾರ ಪ್ರಮಾಣದ ನಷ್ಟವುಂಟಾಗಿದೆ. ವಾಹನದ ಆಕ್ಸೆಲ್ ತುಂಡಾಗಿ ರಸ್ತೆಗೆ ಉಜ್ಜಿದ ನಂತರ ಬೆಂಕಿ ಕಾಣಿಸಿಕೊಂಡಿರುವ ದೃಶ್ಯಾವಳಿ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

# ಸಾಂಸ್ಕೃತಿಕ ಕಾರ್ಯಕ್ರಮ ಅವ್ಯವಹಾರ ತನಿಖೆಯಾಗಲಿ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಸಕಲೇಶ್ವರಸ್ವಾಮಿ 67ನೇ ಜಾತ್ರಾ ಮಹೋತ್ಸವದಲ್ಲಿ ಕಲಾವಿದರಿಗೆ ಸಂಭಾವನೆ ನೀಡುವಲ್ಲಿ ಅವ್ಯವಹಾರ ನಡೆದಿರುವ ಶಂಕೆಯಿದ್ದು ತನಿಖೆ ನಡೆಸಬೇಕು ಎಂದು ಕಲಾವಿದರ ಸಂಘದ ತಾಲ್ಲೂಕು ಅಧ್ಯಕ್ಷ ಹೆಚ್.ಇ. ರಮೇಶ್ ಒತ್ತಾಯಿಸಿದರು.

ಸುದ್ದಿಗೋಷ್ಟಿಯಲ್ಲಿ ಬುಧವಾರ ಮಾತನಾಡಿ, 15 ದಿನಗಳ ಜಾತ್ರೆಯಲ್ಲಿ ನಿಗದಿಯಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿಲ್ಲ. ಆದರೆ ಬಿಲ್ ಮಾತ್ರ ಕರಾರುವಕ್ಕಾಗಿ ಆಗಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಜವಾಬ್ದಾರಿ ವಹಿಸಿಕೊಂಡವರು ಅವ್ಯಾಹತ ಭ್ರಷ್ಟಾಚಾರ ಎಸಗಿದ್ದಾರೆ ಎಂದು ಆರೋಪಿಸಿದರು.

ಫೆ. 13 ರಂದು ಹಾನುಬಾಳ್ ಮೆಲೋಡಿಸ್ ಕಲಾತಂಡಕ್ಕೆ 25 ಸಾವಿರ ರೂ. ಸಂಭಾವನೆ ನೀಡಿದರೆ ಫೆ. 14 ರಂದು ಕಾರ್ಯಕ್ರಮ ನಡೆಸಿಕೊಟ್ಟ ಬೆಂಗಳೂರಿನ ತಂಡಕ್ಕೆ 28 ಸಾವಿರ ರೂ. ನೀಡಲಾಗಿದೆ. ಫೆ. 13 ರಿಂದ 27ರ ವರೆಗೆ ವಿವಿಧ ಕಾರ್ಯಕ್ರಮಗಳ ಪಟ್ಟಿ ಮಾಡಲಾಗಿತ್ತಾದರೂ ಪ್ರತಿದಿನ ಅಂದುಕೊಂಡರೆ ಸಾಂಸ್ಕೃತಿಕ ತಂಡಗಳು ಬಂದಿರಲಿಲ್ಲ. ಆದರೂ ಬಿಲ್ ಪಾವತಿಯಾಗಿದೆ. ಕೆಲವರಿಗೆ 20 ಸಾವಿರ ಮತ್ತೆ ಕೆಲವರಿಗೆ 58 ಸಾವಿರ ರೂ. ತನಕ ಹಣ ಸಂದಾಯವಾಗಿದೆ. ಈ ಭ್ರಷ್ಟಾಚಾರದಲ್ಲಿ ಪುರಸಭೆ ಮುಖ್ಯಾಧಿಕಾರಿ ಸೇರಿ ಹಲವರ ಕೈವಾಡವಿದೆ ಎಂದು ಆರೋಪಿಸಿದರು.

ಕಲಾವಿದರ ಸಂಘದ ಸದಸ್ಯ ಪ್ರಿಯಾಂಕ ಮಾತನಾಡಿ, ಸಕಲೇಶ್ವರ ಸ್ವಾಮಿ ಹೆಸರಿನಲ್ಲಿ ನಡೆಯುವ ಜಾತ್ರಾ ಮಹೋತ್ಸವದಲ್ಲಿ ಮನೋರಂಜನಾ ಕಾರ್ಯಕ್ರಮ ಉತ್ತಮವಾಗಿ ಮೂಡಿಬರಬೇಕೆಂದು ಮೈಸೂರಿನ ಕಲಾ ತಂಡವೊಂದನ್ನು ಸಂಪರ್ಕಿಸಿದ್ದೆ. ಆದರೆ ಸ್ಥಳೀಯ ಆಡಳಿತ ಕಲಾವಿದರಿಗೆ ಗೌರವ ನೀಡಲಿಲ್ಲ. ಇಲ್ಲಿವರೆಗೆ ಸಂಭಾವನೆ ಪಾವತಿಸಿಲ್ಲ ಎಂದರು.

# 2 ಕೋಟಿ ರೂ. ವೆಚ್ಚದ ತಡೆಗೋಡೆ ಕಾಮಗಾರಿಗೆ ಭೂಮಿಪೂಜೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಪಟ್ಟಣದ ವಾರ್ಡ್ ನಂ. 5 ಮತ್ತು 2ರಲ್ಲಿ ಹಾದು ಹೋಗಿರುವ ರಾಜಕಾಲುವೆಯ ಎರಡೂ ಬದಿ ತಡೆಗೋಡೆ ನಿರ್ಮಾಣ ಮಾಡಲಾಗುತ್ತಿದ್ದು, ಮೊದಲ ಹಂತವಾಗಿ ವಾರ್ಡ್ ನಂ.5 ರಲ್ಲಿನ ವೆಂಕಟೇಶ್ವರ ಲೇಔಟ್‌ನ 280 ಮೀಟರ್ ಕಾಲುವೆಗೆ 2 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ತಡೆಗೋಡೆ ನಿರ್ಮಾಣ ಮಾಡಲಾಗುವುದು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಹೇಮಾವತಿ ನಾಲಾ ವಿಭಾಗದಡಿ ಕೈಗೆತ್ತಿಕೊಂಡಿರುವ ಆರು ಕಾಮಗಾರಿಗಳ ಪೈಕಿ ರಾಜಕಾಲುವೆಗೆ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಬುಧವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಮಾರೇನಹಳ್ಳಿ ಕೆರೆ ಭರ್ತಿಯಿಂದಾಗಿ ಹೆಚ್ಚಾದ ನೀರು ಪಟ್ಟಣದ ರಾಜಗಾಲುವೆ ಮೂಲಕ ಅಡಗೂರು ಕೆರೆ ಸೇರಲಿದೆ. ಈಗಾಗಲೇ ಮಾರೇನಹಳ್ಳಿಯಿಂದ ವೆಂಕಟೇಶ್ವರ



ಲೇಔಟ್ ವರೆಗೆ ತಡೆಗೋಡೆ ನಿರ್ಮಾಣ ಮಾಡಲಾಗಿದೆ.

ಮುಂದುವರಿದು 280 ಮೀಟರ್ ಕಾಲವೆಗೆ ಎರಡು ಬದಿಯಲ್ಲಿ ತಡೆಗೋಡೆ ನಿರ್ಮಿಸಲಾಗುವುದು. ಇದರಿಂದ ನಿವಾಸಿಗಳಿಗೆ ಅನುಕೂಲವಾಗಲಿದೆ ಎಂದರು. ಈ ಕಾಮಗಾರಿಗೆ ಮೂರು ವರ್ಷಗಳ ಹಿಂದೆಯೇ ಟೆಂಡರ್ ಕರೆಯಲಾಗಿದ್ದರೂ ತಾಂತ್ರಿಕ ಕಾರಣಗಳಿಂದ ವಿಳಂಬವಾಗಿ, ಇದೀಗ ಟಂಡರ್ ಪ್ರಕಿಯೆ ಮುಗಿದು ಕಾಮಗಾರಿಗಾಗಿ ಭೂಮಿಪೂಜೆ ನಡೆಸಲಾಗಿದೆ. ರಾಜಗಾಲುವೆಯಲ್ಲಿ ಹೇಮಾವತಿ ನೀರು ಸೇರಿ ಹರಿಯುವುದರಿಂದ ಮಳೆಗಾಲದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುತ್ತದೆ, ಇದು ಅಕ್ಕಪಕ್ಕದ ಬಡಾವಣೆಗಳಿಗೆ ನುಗ್ಗದಂತೆ ಎರಡು ಕಡೆ ತಡೆಗೋಡೆ ನಿರ್ಮಾಣ ಮಾಡಲಾಗುತ್ತಿದೆ. ಅನುದಾನ ಲಭ್ಯತೆ ಆಧಾರದ ಮೇಲೆ ಹಂತ, ಹಂತವಾಗಿ ತಡೆಗೋಡೆ ನೀರ್ಮಾಣ ಮಾಡಲಾಗುತ್ತದೆ. ಇದೀಗ 280 ಮೀಟರ್ ತಡೆಗೋಡೆ ನಿರ್ಮಾಣದೊಂದಿಗೆ 5ನೇ ವಾಡ್‌ನಲ್ಲಿ ಹಾದುಹೋಗಿರುವ ಕಾಲುವೆ ಪೂರಾ ತಡೆಗೋಡೆ ನಿರ್ಮಾಣ ಮುಗಿಯಲಿದೆ, ಮುಂದಿನ ಹಂತದಲ್ಲಿ ವಾರ್ಡ್ ನಂ. 2ರಲ್ಲಿನ ರಾಜಕಾಲುವೆಗೆ ತಡೆಗೋಡೆ ನಿರ್ಮಿಸಲಾಗುವುದು ಎಂದರು. ಪಟ್ಟಣದ ಸುತ್ತಲ್ಲೂ ಹೇಮಾವತಿ ನೀರು ಹರಿಯುವುದರಿಂದ ಹೇಮಾವತಿ ಇಲಾಖೆಯಿಂದ ಆಗಬೇಕಾದ ಕಾಮಗಾರಿಗಳ ಪಟ್ಟಿಯನ್ನು ಸರ್ಕಾರಕ್ಕೆ ಕಳಿಸಿ ಅನುಮೋದನೆ ಪಡೆಯಲಾಗುತಿದೆ ಎಂದವರು 6 ಕಾಮಗಾರಿಗಳನ್ನು 5 ಕೋಟಿ ರೂ. ಪ್ಯಾಕೇಜ್‌ನಡಿ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ಪುರಸಭಾಧ್ಯಕ್ಷ ಸಿ.ಎನ್. ಮಹೋನ್, ಉಪಾಧ್ಯಕ್ಷೆ ರಾಣಿಕೃಷ್ಣ, ಸದಸ್ಯರಾದ ಆದರ್ಶ, ರಾಮು, ಗಣೇಶ್, ಮುಖಂಡರಾದ ರಾಜು, ಕೃಷ್ಣ, ಬೆಳಗುಲಿ ಪುಟ್ಟಸ್ವಾಮಿ, ಜೆಇ ವಿಜಯ್, ಗುತ್ತಿಗೆದಾರ ತೋಪೆಗೌಡ ಇತರರು ಇದ್ದರು.

# ಕಾಡಾನೆ ಹಾವಳಿ ನಿಯಂತ್ರಣಕ್ಕೆ ನೆರವು ಕೋರಿದ ಎಂಪಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ನವದೆಹಲಿ: ಕಾಡಾನೆ ಸಮಸ್ಯೆಯಿಂದಾಗಿ ಹಾಸನ ಜಿಲ್ಲೆಯ ಬೇಲೂರು ಹಾಗೂ ಸಕಲೇಶಪುರದ ರೈತರು ನಲುಗಿ ಹೋಗಿದ್ದು ಕೂಡಲೇ ಕೇಂದ್ರ ರೈತರ ನೆರವಿಗೆ ಧಾವಿಸಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಬುಧವಾರ ಸಂಸತ್ ಅಧಿವೇಶನದಲ್ಲಿ ಮಾತನಾಡಿ, ಜಿಲ್ಲೆಯ ಬೇಲೂರು ಹಾಗೂ ಸಕಲೇಶಪುರದಲ್ಲಿ ಕಾಡಾನೆ ಸಮಸ್ಯೆ ಕೈ ಮೀರಿದ್ದು, ಕಳೆದ 25 ವರ್ಷಗಳಲ್ಲಿ 80ಕ್ಕೂ ಅಧಿಕ ಜನರು ಕಾಡಾನೆ ಹಾವಳಿಯಿಂದ ಮೃತಪಟ್ಟಿದ್ದಾರೆ. ರೈತರು ಬೆಳೆಗಳನ್ನು ಬೆಳೆಯಲಾಗದೆ, ಕಾಡಾನೆ ಹಾವಳಿಯಿಂದ ತಮ್ಮ ಜೀವವನ್ನು ಉಳಿಸಿಕೊಳ್ಳಲು ಪರಿತಪಿಸುತ್ತಿದ್ದಾರೆ. ಕಾಡಾನೆಗಳ ಸ್ಥಳಾಂತರ ತಾತ್ಕಾಲಿಕ ಕಾರ್ಯವಾಗಿದ್ದು, ಕೇಂದ್ರ ಸರ್ಕಾರ ಇದಕ್ಕೆ ಶಾಶ್ವತ ಪರಿಹಾರವನ್ನು ಒದಗಿಸಬೇಕೆಂದು ಕೇಳಿಕೊಂಡರು.

ಕಾಡಾನೆ ಹಾವಳಿ ತಪ್ಪಿಸಲು ವಿಶೇಷ ಅನುದಾನವನ್ನು ಎನ್ ಡಿ ಆರ್ ಎಫ್ ನಿಧಿ ಅಡಿಯಲ್ಲಿ ನೀಡುವಂತೆ ಸಂಸದರು ಇದೇ ವೇಳೆ ವಿನಂತಿಸಿದರೆಲ್ಲದೆ ಅರಣ್ಯ ಇಲಾಖೆ ಮೂಲಕ ಶಾಶ್ವತ ಕ್ರಮಕ್ಕೆ ಕೇಂದ್ರಕ್ಕೆ ಅಗ್ರಹಿಸಿದರು.



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಮುಂಬೈ: ನಗರದ ಜಹಾಂಗೀರ್ ಆರ್ಟ್ ಗ್ಯಾಲರಿಯಲ್ಲಿ ಕರ್ನಾಟಕದ ನಾಲ್ವರು ಕಲಾವಿದರ ಸಮೂಹ ಚಿತ್ರಕಲಾ ಪ್ರದರ್ಶನಕ್ಕೆ ಖ್ಯಾತ ಚಿತ್ರಕಲಾವಿದ ಮನೋಜ್‌ಕುಮಾರ್ ಸಾಕಳೆ ಚಾಲನೆ ನೀಡಿದರು.

# ಪ್ರಚಾರ ಕೊರತೆ: ಮಾರುಕಟ್ಟೆ ಹರಾಜು ಪ್ರಕ್ರಿಯೆ ಮುಂದೂಡಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಆಲೂರು: ವಾರದ ಸಂತೆ ಮತ್ತು ದಿನವಹಿ ಮಾರುಕಟ್ಟೆ ಹರಾಜು ಪ್ರಕ್ರಿಯೆ ಸಂಬಂಧ ಪ್ರಚಾರ ಮಾಡಿಲ್ಲ ಎಂದು ಸ್ಥಳೀಯರು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಪ್ರಕ್ರಿಯೆಯನ್ನು ಮುಂದೂಡಲಾಗಿದೆ.

ಪಟ್ಟಣ ಪಂಚಾಯಿತಿಯಲ್ಲಿ ಹಮ್ಮಿಕೊಂಡಿದ್ದ ವಿಶೇಷ ಸಭೆಯ ವೇಳೆ ಕಚೇರಿ ಹೊರಗೆ ಸಾರ್ವಜನಿಕರು ಪ್ರತಿಭಟನೆ ನಡೆಸಿದ್ದರಿಂದ ಪ.ಪಂ. ಅಧ್ಯಕ್ಷೆ ತಾಹೆರಾ ಬೇಗಂ ಈ ನಿರ್ಧಾರ ಪ್ರಕಟಿಸಿದರು.

ಆನ್‌ಲೈನ್ ಮೂಲಕ ಏಕಮಾತ್ರ ಟೆಂಡರ್ ಸ್ವೀಕೃತವಾಗಿರುವುದರಿಂದ ಅದನ್ನು ರದ್ದುಪಡಿಸಿ




ಟೆಂಡರ್ ಮೊತ್ತವನ್ನು ಪರಿಷ್ಕರಣೆ ಮಾಡಿ ತಕ್ಷಣ ಮರು ಟೆಂಡರ್ ಕರೆಯಲು ತೀರ್ಮಾನಿಸಿದರು. ಸಭೆ ತೀರ್ಮಾನವನ್ನು ಅಧ್ಯಕ್ಷೆ ತಾಹೆರಾ ಬೇಗಂ ಮತ್ತು ಮುಖ್ಯಾಧಿಕಾರಿ ನಟರಾಜ್ ಪ್ರತಿಭಟನಾಕಾರರಿಗೆ ತಿಳಿಸಿದ ನಂತರ ಪ್ರತಿಭಟನೆ ಹಿಂತೆಗೆದುಕೊಳ್ಳಲಾಯಿತು.

ಒಳಚರಂಡಿ ರಾಜ್ಯ ನೀರು ಸಂಸ್ಕರಣ ಘಟಕದ ವತಿಯಿಂದ ಪುರಸಭೆ ವ್ಯಾಪ್ತಿಯಲ್ಲಿರುವ 50 ಗುಂಟೆ ಜಮೀನಿನಲ್ಲಿ ತ್ಯಾಜ್ಯ ನೀರು ಸಂಸ್ಕರಣ ಘಟಕ ಸ್ಥಾಪಿಸಲು ಜಾಗವನ್ನು ಕೆ.ಯು.ಐ.ಡಿ.ಎಫ್.ಸಿ. ಇಲಾಖೆಗೆ ಹಸ್ತಾಂತರ ಮಾಡಬೇಕೆಂಬ ಸರ್ಕಾರದ ಸುತ್ತೋಲೆಗೆ ಸದಸ್ಯರು ಒಪ್ಪಿಗೆ ಸೂಚಿಸಿದರು.

ಪ್ರತಿ ವರ್ಷ ಸಂತೆ, ದಿನವಹಿ ಮಾರುಕಟ್ಟೆ ಹರಾಜು ಮಾಡುವ ಮುನ್ನ ಹ್ಯಾಂಡ್‌ಬಿಲ್ ಹಂಚುವುದು ಸೇರಿದಂತೆ ಆಟೋ ಮೂಲಕ ಪ್ರಚಾರ ಮಾಡಲಾಗುತ್ತಿತ್ತು. ಆದರೆ ಈ ಬಾರಿ ಯಾರಿಗೂ ಗೊತ್ತಿಲ್ಲದ ಹಾಗೆ ಟೆಂಡರ್ ಪ್ರಕ್ರಿಯೆ ಮುಗಿದಿರುವುದರ ಹಿಂದೆ ಇರುವ ಕಾರಣವಾದರೂ ಏನು ಎಂದು, ಸದಸ್ಯರಾದ ತೌಫಿಕ್, ಖಾಲಿದ್, ಧರ್ಮ, ನಿಂಗರಾಜು, ಸಂತೋಷ್ ಆಕ್ರೋಶ ವ್ಯಕ್ತಪಡಿಸಿದರು.

ಈ ಬಗ್ಗೆ ಇ-ಟೆಂಡರ್ ಕರೆದು ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಚಾರ ಮಾಡಲಾಗಿತ್ತು ಎಂದು ಮುಖ್ಯಾಧಿಕಾರಿ ನಟರಾಜ್ ಮಾಹಿತಿ ನೀಡಿದರು.

ಯಾವುದೇ ವಾರ್ಡ್ ಯಾವುದೆ ಕೆಲಸವಾಗಿಲ್ಲ. ಆದರೆ 15ನೇ ಹಣಕಾಸು ಯೋಜನೆಯಲ್ಲಿ ಲಕ್ಷಾಂತರ ರೂ. ಬಿಲ್ ಪಾವತಿಯಾಗಿದೆ. ಸಭೆ ಗಮನಕ್ಕೆ ಬಾರದೆ ಪ್ರಕ್ರಿಯೆಗಳು ನಡೆಯುತ್ತಿವೆ. ಮುಂದಿನ ದಿನಗಳಲ್ಲಿ ಯಾವುದೆ ಕೆಲಸವಾಗಬೇಕಾದರೂ ಸಭೆ ಗಮನಕ್ಕೆ ತರಬೇಕು ಎಂದು ಸದಸ್ಯರು ಆಗ್ರಹಿಸಿದರು.

ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ದತಿಯಡಿ ಕಟ್ಟಡ/ನಿವೇಶನಗಳಿಗೆ ಚಾಲ್ತಿ ಸಾಲಿನ ಮಾರುಕಟ್ಟೆ ಬೆಲೆಗೆ ಕನಿಷ್ಠ ಶೇ. 3 ರಷ್ಟು ಹೆಚ್ಚಳ ಮಾಡಲು ಸರ್ಕಾರದ ನಿರ್ದೇಶನದಂತೆ ತೀರ್ಮಾನಿಸಲಾಯಿತು.

ವಾಣಿಜ್ಯ ಮಳಿಗೆ ಹರಾಜು ಇ-ಟೆಂಡರ್ ಅವಧಿ ಮಾ. 24 ಕ್ಕೆ ಅಂತಿಮ ದಿನವಾಗಿದೆ. ಪಂಚಾಯಿತಿ ವ್ಯಾಪ್ತಿಯಲ್ಲಿ ಪಾಳು ಬಿದ್ದ ಅಥವಾ ಅಪಾಯಕಾರಿಯಾದ ಕಟ್ಟಡಗಳನ್ನು ತೆರವುಗೊಳಿಸುವಂತೆ ಸಂಬಂಧಪಟ್ಟ ಮಾಲೀಕರಿಗೆ ತಿಳಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಬಾರ ಮುಖ್ಯಾಧಿಕಾರಿ ನಟರಾಜ್ ಮಾಹಿತಿ ನೀಡಿದರು.

ನಾಮ ನಿರ್ದೇಶಿತ ಸದಸ್ಯರಾದ ಎ.ಜೆ. ಸಂದೇಶ್, ಖಾಲಿದ್ ಪಾಷ ಮತ್ತು ಎ.ಎನ್. ಪ್ರವೀಣ್ ಅವರಿಗೆ ಸನ್ಮಾನಿಸಲಾಯಿತು.

# ಇಂದು ಹಂಪನಹಳ್ಳಿ ತಿಮ್ಮೇಗೌಡರ ಕೃತಿ ಬಿಡುಗಡೆ

ಹಾಸನ: ಕರ್ನಾಟಕ ಜಾನಪದ ಪರಿಷತ್, ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಮಾ. 20ರ ಗುರುವಾರ ಬೆಳಿಗ್ಗ 10.30ಕ್ಕೆ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಡಾ. ಹಂಪನಹಳ್ಳಿ ತಿಮ್ಮೇಗೌಡ ಅವರ ದಾಸೊಕ್ಕಲಿಗರು, ದೇಶಿಯೊಳ್ ಚೆಲ್ವು, ಮರೆಯದ ಮಹನೀಯರು, ಗಾಂಧಿ ಮತ್ತು ಇತರ ಲೇಖನಗಳು ಎಂಬ ಕೃತಿಗಳ ಬಿಡುಗಡೆ ಸಮಾರಂಭ ಆಯೋಜಿಸಲಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ಹಿ.ಚಿ. ಬೋರಲಿಂಗಯ್ಯ ಕೃತಿ ಬಿಡುಗಡೆ ಮಾಡಲಿದ್ದಾರೆ. ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ದಾಸೊಕ್ಕಲಿಗರು, ದೇಶಿಯೊಳ್ ಚೆಲ್ವು ಕೃತಿಗಳ ಕುರಿತು ಹೇಮ ಗಂಗೋತ್ರಿಯ ಪ್ರಾಧ್ಯಾಪಕ ಡಾ. ಪುಟ್ಟಸ್ವಾಮಿ ಮಾತನಾಡಲಿದ್ದಾರೆ. ಮರೆಯದ ಮಹನೀಯರು, ಗಾಂಧಿ ಮತ್ತು ಇತರ ಲೇಖನಗಳು ಎಂಬ ಕೃತಿಗಳ ಕುರಿತು ನಿವೃತ್ತ ಪ್ರಾಂಶುಪಾಲ ತಿರುಪತಿಹಳ್ಳಿ ಶಿವಶಂಕರಪ್ಪ ಮಾತನಾಡಲಿದ್ದಾರೆ.

ಕೃತಿಕಾರ ಡಾ. ಹಂಪನಹಳ್ಳಿ ತಿಮ್ಮೇಗೌಡ, ಕರ್ನಾಟಕದ ಜಾನಪದ ಪರಿಷತ್ ಜಿಲ್ಲಾ ಘಟಕದ ಗೌರವ ಸಲಹೆಗಾರ ಮೇಟಿಕೆರೆ ಹಿರಿಯಣ್ಣ ಮತ್ತಿತರರು ಭಾಗವಹಿಸಲಿದ್ದಾರೆ.

# ಮಾ. 23ಕ್ಕೆ ಸಂತ ಕಾಳೇಶ್ವರಿ, ಚಿಕ್ಕಮ್ಮ ದೇವಿ ದೇಗುಲ ಲೋಕಾರ್ಪಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಬಾಗೂರು ಗ್ರಾಮದ ಪ್ರಸಿದ್ಧ ಸಂತೇ ಕಾಳೇಶ್ವರಿ ಹಾಗೂ ಚಿಕ್ಕಮ್ಮ ದೇವಿ ದೊಡ್ಡಮ್ಮ ದೇವಿ ಅಮ್ಮನವರ ದೇಗುಲಗಳ ಉದ್ಘಾಟನೆ ಕಾರ್ಯಕ್ರಮ ಮಾರ್ಚ್ 23ರಂದು ನಡೆಯಲಿದೆ.

ಆದಿಚುಂಚನಗಿರಿ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ದೇಗುಲ ಉದ್ಘಾಟನೆ ಹಾಗೂ ವಿಮಾನ ಗೋಪುರ ಮುಖಮಂಟಪ ಮಹಾ ಕುಂಭಾಭಿಷೇಕ ಮಹೋತ್ಸವ ಜರುಗಲಿದೆ. 5 ವರ್ಷದಿಂದ ನಡೆದಿರುವ ಕಾಮಗಾರಿಗೆ ಅಂದಾಜು 5 ಕೋಟಿ ರೂ. ವೆಚ್ಚವಾಗಿದೆ.

ಮಾರ್ಚ್ 21ರ ಶುಕ್ರವಾರ ಬೆಳಿಗ್ಗೆ 9ಕ್ಕೆ ಗಣಪತಿ ಪೂಜೆ, ಅಘೋರ ಹೋಮ, ಪ್ರಸಾದ ವಾಸ್ತು ಬಲಿ, ತೀರ್ಥ ಪ್ರಸಾದ ವಿನಿಯೋಗವಾಗಲಿದೆ. ಮಾರ್ಚ್ 22ರ ಶನಿವಾರ ಬೆಳಿಗ್ಗೆ 9ಕ್ಕೆ ಗಣಪತಿ ಪ್ರಾರ್ಥನೆಯೊಂದಿಗೆ ಕಳಶ ಸ್ಥಾಪನೆ ಬಿಂಬ ಶುದ್ಧಿ, ಅನ್ನ ಸಂತರ್ಪಣೆ ಪ್ರಸಾದ ವಿನಿಯೋಗವಾಗಲಿದೆ.

ಮಾರ್ಚ್ 23ರ ಭಾನುವಾರ ಬೆಳಿಗ್ಗೆ 7ಕ್ಕೆ ಸ್ಥಿರ ಬಿಂಬ, ತತ್ವನ್ಯಾಸ ಹೋಮ, ಪ್ರತಿಷ್ಠಾಪನ ಹೋಮ, ದುರ್ಗಾ ಹೋಮ, ಬೆಳಿಗ್ಗೆ 10ಕ್ಕೆ ಪೂರ್ಣಾಹುತಿ ನಂತರ ಕುಂಭಾಭಿಷೇಕ ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ಧಾರ್ಮಿಕ ಸಭೆಯಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ಹಾಸನದ ಆದಿಚುಂಚನಗಿರಿ ಶಂಭನಾಥ ಸ್ವಾಮೀಜಿ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಸಕ ಸಿ.ಎನ್.ಬಾಲಕೃಷ್ಣ, ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ಲೋಕಸಭಾ ಸದಸ್ಯ ಶ್ರೇಯಸ್ ಪಟೇಲ್, ಶಾಸಕರಾದ ಎಚ್.ಡಿ.ರೇವಣ್ಣ, ಕೆ.ಎಂ. ಶಿವಲಿಂಗೇಗೌಡ ಭಾಗವಹಿಸಲಿದ್ದಾರೆ

# ಪಕ್ಷ ಸಂಘಟನೆಗೆ ನಿರಾಸಕ್ತಿ ಸರಿಯಲ್ಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಅರಕಲಗೂಡು: ವಿಧಾನಸಭೆ ಚುನಾವಣೆ ಮುಗಿದು ವರ್ಷಗಳೇ ಕಳೆದರೂ ಪಕ್ಷ ಸಂಘಟನೆಗೆ ಮುಖಂಡರು ಮುಂದಾಗುತ್ತಿಲ್ಲ. ಅದರ ಪರಿಣಾಮ ಚುನಾವಣೆ ಮೇಲೆ ಬೀರುತ್ತದೆ ಎಂಬ ಕಾಳಜಿ ಅವರಿಗೆ ಇಲ್ಲ ಎಂದು ಕಾಂಗ್ರೆಸ್ ಮುಖಂಡ ಹೆಚ್.ಪಿ. ಶ್ರೀಧರ್‌ಗೌಡ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಉಸ್ತುವಾರಿಗಳು, ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಇಲ್ಲಿ ಬಿಜೆಪಿ ಅಥವಾ ಜೆಡಿಎಸ್‌ಗಿಂತ ಕಾಂಗ್ರೆಸ್‌ನವರೇ ಪಕ್ಷಕ್ಕೆ ಮುಳ್ಳಾಗಿದ್ದಾರೆ. ನನಗೆ ವರಿಷ್ಠರು ನೀಡಿದ ಬೆಂಬಲದಿಂದಾಗಿ ಪೊಲೀಸ್ ವೃತ್ತಿಗೆ ರಾಜೀನಾಮೆ ನೀಡಿ ಬಂದಿದ್ದೇನೆ. ಕಳೆದ ವಿಧಾನಸಭೆ ಚುನಾವಣೆ ವೇಳೆ ಕೃಷ್ಣೇಗೌಡ ಸೇರಿ ಪಕ್ಷದ ಎಲ್ಲಾ ಪ್ರಮುಖರ ಮನೆಗೆ ತೆರಳಿ ಬೆಂಬಲ




ನೀಡುವಂತೆ ಮನವಿ ಮಾಡಿದ್ದೆ. ಆದರೆ ಅವರು ಕೂಡ ಪಕ್ಷೇತರವಾಗಿ ಸ್ಪರ್ಧಿಸಿ ಅವರು ಸೋತು, ನನ್ನ ಸೋಲಿಗೂ ಕಾರಣರಾದರು. ಸೋತರು ಕೂಡ ಕ್ಷೇತ್ರ ಬಿಟ್ಟು ಹೋಗಿಲ್ಲ. ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಮಾಡಿ ಗಟ್ಟಿಗೊಳಿಸಿದ್ದೇನೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಾನು ಅಧಿಕೃತ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೆ. ಹಿಂದಿನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಸನ್ನಕುಮಾರ್ ಸೇರಿ ಚುನಾಯಿತ ಸದಸ್ಯರು, ಪ್ರಮುಖ ಮುಖಂಡರು ಕೂಡ ನನ್ನ ಪರವಾಗಿ ಮತ ಕೇಳಲಿಲ್ಲ. ಚುನಾವಣೆ ಮುಗಿದು ವರ್ಷಗಳುರುಳಿದರೂ ಸಂಘಟನೆಗೆ ಸ್ಪಂದಿಸುತ್ತಿಲ್ಲ. ನನ್ನ ವಿರುದ್ಧ ಧೋರಣೆ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಹೀಗಿದ್ದರೂ ಕೂಡ ನಾನು ಇಡೀ ಕ್ಷೇತ್ರವನ್ನು ಸುತ್ತಿ ಪಕ್ಷ ಸಂಘಟನೆ ಮಾಡುತ್ತಿದ್ದೇನೆ ಎಂದು ತಿಳಿಸಿದರು.

ಕೆಪಿಸಿಸಿ ಆದೇಶದ ಮೇರೆಗೆ ಪಕ್ಷದಲ್ಲಿ ಕ್ರಿಯಾಶೀಲವಾಗಿರುವ ಮುಖಂಡರು, ಕಾರ್ಯಕರ್ತರಿಗೆ ವಿವಿಧ ಇಲಾಖೆಯ ನಾಮನಿರ್ದೇಶನ ಸದಸ್ಯ ಹುದ್ದೆ, ಸಮಿತಿಯಲ್ಲಿ ಅವಕಾಶ ಮತ್ತು ಪಕ್ಷದ ಬ್ಲಾಕ್ ಅಧ್ಯಕ್ಷರು, ಪದಾಧಿಕಾರಿಗಳ ಹುದ್ದೆಯನ್ನು ಕಲ್ಪಿಸಿ ದೊಡ್ಡ ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ. ಪ್ರಮುಖವಾಗಿ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷನಾಗಿ, ಇಡೀ ಸಮಿತಿ ಸದಸ್ಯರೊಂದಿಗೆ ಪಂಚ ಗ್ಯಾರಂಟಿಗಳು ಪ್ರತಿಯೊಬ್ಬರಿಗೂ ಸಿಗುವಂತೆ ಕಾರ್ಯಕ್ರಮ ರೂಪಿಸಿ ಯಶಸ್ವಿಯಾಗಿದ್ದೇನೆ. ಈ ಗ್ಯಾರಂಟಿ ಯೋಜನೆಗಳ ಬಗ್ಗೆ ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಸನ್ನಕುಮಾರ್, ಪರಾಭವಗೊಂಡಿರುವ ಕೃಷ್ಣೇಗೌಡ ಅವರು ಕ್ಷೇತ್ರದಲ್ಲಿ ಎಲ್ಲಿಯಾದರೂ ಸಭೆ ನಡೆಸಿ ಕಾರ್ಯಕ್ರಮ ಕುರಿತು ಅರಿವು ಮೂಡಿಸಿದ್ದಾರೆಯೇ ಎಂದು ನೇರವಾಗಿ ಉಸ್ತುವಾರಿಗಳ ಮುಂದೆ ಪ್ರಶ್ನಿಸಿದರು.

ಈ ಸಭೆಗೆ ಕೃಷ್ಣೇಗೌಡ ಸೇರಿ ಇತರೆ ಮುಖಂಡರನ್ನು ಕಾಂಗ್ರೆಸ್ ಪಕ್ಷದ ಕಚೇರಿಗೆ ಬರುವಂತೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೋಮಶೇಖರ್ ಕರೆ ಮಾಡಿ ಆಹ್ವಾನಿಸಿದ್ದಾರೆ. ನಿಷ್ಠಾವಂತ ಮುಖಂಡರು, ಕಾರ್ಯಕರ್ತರು ಅಧಿಕೃತ ಕಚೇರಿ ಸಭೆಯಲ್ಲಿ ಭಾಗವಹಿಸಿದ್ದಾರೆ. ಪಕ್ಷದ ನಿಯಮದಂತೆ ನಡೆದುಕೊಂಡಿದ್ದಾರೆ ವಿನಃ ಪ್ರವಾಸಿ ಮಂದಿರಕ್ಕೆ ಹೋಗಿಲ್ಲ. ಈ ರೀತಿಯ ಪಕ್ಷ ವಿರೋಧಿ ಚಟುವಟಿಕೆಯನ್ನು ಕೃಷ್ಣೇಗೌಡ, ಪ್ರಸನ್ನಕುಮಾರ್ ಮಾಡುತ್ತಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿಗಳಾದ ಎನ್. ಸಂಪಂಗಿ, ಸಾಹಿದ್ ತೆಕ್ಕೆನ್ ಅವರು ನೇರವಾಗಿ ಗಮನಿಸಿದ್ದಾರೆ. ಇನ್ನೂ ಮುಂದೆ ಈ ರೀತಿ ಪಕ್ಷ ವಿರೋಧಿ ಕಾರ್ಯದಲ್ಲಿ ಭಾಗಿಯಾಗದಂತೆ ಅಂತಿಮ ಎಚ್ಚರಿಕೆಯನ್ನು ನೀಡಬೇಕೆಂದು ಮನವಿ ಮಾಡಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಲಕ್ಷ್ಮಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೋಮಶೇಖರ್, ರಾಜೇಗೌಡ, ನಿವೃತ್ತ ಜಿಲ್ಲಾಧಿಕಾರಿ ಪುಟ್ಟಸ್ವಾಮಿ, ಗ್ಯಾರಂಟಿ ಸಮಿತಿ ಸದಸ್ಯರಾದ ರಾಜೇಶ್, ನಾಗರಾಜ್, ಬಗರ್ ಹುಕುಂ ಸಮಿತಿ ಸದಸ್ಯ ಪುಟ್ಟಯ್ಯ ಇತರರಿದ್ದರು.

# ಆಲದಮರದಮ್ಮ ದೇವಿಗೆ ಮಡಿಲು ಸೇವೆ

## ಅತ್ತೆ ಕಿರಿಕುಳ ತಾಳಲಾರದೆ ಅಗ್ನಿಗೆ ಹಾರಿದ್ದ ಸೊಸೆ | ನೂರಾರು ವರ್ಷಗಳ ನಂಬಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಪಿ. ಹೊಸಹಳ್ಳಿ ಗ್ರಾಮದಲ್ಲಿ ಮಾರಿಹಬ್ಬ ಹಾಗೂ ಶ್ರೀ ಆಲದ ಮರದಮ್ಮ ದೇವಿಯ ಹಬ್ಬದ ಪ್ರಯುಕ್ತ ವಿಶೇಷ ಪೂಜೆ ಪುನಸ್ಕಾರ ನೆರವೇರಿದವು.

ನೂರಾರು ವರ್ಷಗಳ ಹಿಂದೆ ಗ್ರಾಮದ ಸೊಸೆಯೊಬ್ಬಳು ಊರಿನ ಸೊಸೆಯಂದಿರು ಹಾಗೂ ಹೆಣ್ಣು ಮಕ್ಕಳ ಶ್ರೇಯಸ್ಸಿಗಾಗಿ ತನ್ನನ್ನು ತಾನು ಅಗ್ನಿಕುಂಡಕ್ಕೆ ಅರ್ಪಿಸಿಕೊಂಡಿದ್ದು ಅಂತಹ ಸಹಾನುಭೂತಿ ಹಾಗೂ ಗೌರವ ಸಂಪನ್ನೆಗೆ ಮಡಿಲು ತುಂಬುವ ಸಾಂಪ್ರದಾಯಿಕ ಹಬ್ಬ ಇದಾಗಿದೆ.

ಪೂರ್ವ ಕಾಲದಿಂದಲೂ ನಡೆದು ಬಂದಿರುವ ಪದ್ಧತಿಯಂತೆ ಹಬ್ಬದ ಹಿಂದಿನ ರಾತ್ರಿಯಿಂದಲೇ ಸಿದ್ಧತೆಯ ತಯಾರಿಯು ಆರಂಭಗೊಂಡು ಚಿಗಣಿ, ತಂಬಿಟ್ಟು, ಅಡಿಗೆ-ಅಗ್ಗಣಿ, ಆಲದಮರದಮ್ಮನಿಗೆ ವಿವಿಧ ಒಡವೆ-ವಸ್ತ್ರ ಹಾಗೂ ಇನ್ನಿತರ



ಸಿದ್ಧತೆಗಳು ಮುಗಿಯುವಷ್ಟರಲ್ಲಿ ಸೂರ್ಯೋದಯವೇ ಆಗಿಬಿಡುತ್ತದೆ.

ಮಂಗಳವಾರ ಬೆಳಿಗ್ಗೆ 6 ಗಂಟೆಗೆ ಎಲ್ಲವನ್ನು ಸಿದ್ಧಪಡಿಸಿಕೊಂಡ ಮಹಿಳೆಯರು ಬಿದರಿನ ಕುಕ್ಕೆಯಲ್ಲಿ ಅಡುಗೆ ಹಾಗೂ ಪೂಜಾ ಸಾಮಗ್ರಿಯನ್ನು ಅಣಿಮಾಡಿಕೊಂಡು ಗ್ರಾಮದ ಹೃದಯ ಭಾಗದಲ್ಲಿರುವ ಆಲದಮರ ಇರುವಲ್ಲಿಗೆ ಬಂದು ಸೇರಿದರು.

ಹೆಣ್ಣು ಮಕ್ಕಳು ಹಾಗೂ ಸೊಸೆಯಂದಿರು ಮರದ ಬುಡವನ್ನು ತಣ್ಣೀರಿನಿಂದ ತೊಳೆದು, ಅರಿಶಿನ ಕುಂಕುಮವಿಟ್ಟು ರೆಂಬೆ-ಕೊಂಬೆಗಳಿಗೆ ಹೊಸಸೀರೆ ಉಡಿಸಿ ವಿವಿಧ ಪುಷ್ಪ ಹಾಗೂ ಒಡವೆಗಳಿಂದ ಸಿಂಗರಿಸಿದರು. ತಾಯಂದಿರು ಆಲದಮರದಮ್ಮ ದೇವಿಯ ಹಿನ್ನೆಲೆ ಮೇಲಿನ ಸೋಬಾನೆ ಪದ ಹಾಡಿದರು.

ಬಾಳೆದೆಲೆಯನ್ನು ಹಾಸಿ ಚಿಗಣಿ, ತಂಬಿಟ್ಟು, ನೈವೇದ್ಯ, ಪ್ರಸಾದ, ಹಣ್ಣು-ಹಂಪಲದ ಎಡೆ ಇಟ್ಟು, ಜತೆಗೆ ಆಕೆ ಸಾಕಿದ್ದ ನಾಯಿಗೂ ಪಕ್ಕದಲ್ಲಿಯೇ ಎಡೆ ಇಡಲಾಯಿತು. ಗಂಧ ಕರ್ಪೂರ ಬೆಳಗಿಸಿ ಆಲದ ಮರದಮ್ಮದೇವಿಗೆ ಪೂಜೆ ಸಲ್ಲಿಸಿದ ಹೆಣ್ಣುಮಕ್ಕಳು ಹಾಗೂ ಸೊಸೆಯಂದಿರು ಮೂರು ಸುತ್ತು ಪ್ರದಕ್ಷಣೆ ಸುತ್ತಿದರು.

ಆಲದಮರದಮ್ಮ ದೇವಿ ಪುರಾಣ: ಸುಮಾರು 250 ವರ್ಷಗಳ ಹಿಂದೆ ಈ ಗ್ರಾಮದ ಒಂದು ಮನೆಯಲ್ಲಿ ಅತ್ತೆ ಹಾಗೂ ಸೊಸೆಯ ನಡುವೆ ಪ್ರತೀ ದಿನವು ಜಗಳ-ಕಲಹ ನಡೆಯುತ್ತಿತ್ತು. ಸೊಸೆಯು ಗುಣ ಗಾಂಭೀರ್ಯವತಿ, ಸಹನ-ಸಂಪನ್ನೆ ಹಾಗೂ ಧಾರಾಳ ಮನೋಭಾವದವಳಾಗಿದ್ದಳು.

ಜನ- ಜಾನುವಾರುಗಳೊಡನೆ ಪ್ರೀತಿಯಿಂದಿದ್ದ ಆಕೆ ಅತ್ತೆಯ ಕಿರುಕುಳ ಹೆಚ್ಚಾದಾಗ ಒಂದು ದಿನ ಊರ ಪಕ್ಕದಲ್ಲಿರುವ ಅವರ ಹುಲ್ಲಿನ ಕೊಪ್ಪಲಿಗೆ ಬಂದು ಜೋಡಿಸಿಟ್ಟಿದ್ದ ಆಲದ ಮರದ ಸೌದೆಯ ನಡುವೆ ಸೇರಿಕೊಂಡು ನನ್ನ ನೋವು ನನಗೆ ಕೊನೆಯಾಗಲಿ ನನಗಲ್ಲದೆ ಈ ಊರಿನ ಮತ್ಯಾವ ಸೊಸೆಯರಿಗೂ ಬರಬಾರದು ಎಂದು ಆಶೀರ್ವದಿಸಿ ತಾನೇ ಬೆಂಕಿ ಹೊತ್ತಿಸಿಕೊಳ್ಳುತ್ತಾಳೆ.

ಆಕೆ ಪ್ರೀತಿಯಿಂದ ಸಾಕಿದ್ದ ನಾಯಿಯೂ ಬೆಂಕಿಯಲ್ಲಿ ಹಾರಿ ಪ್ರಾಣ ಬಿಡುತ್ತದೆ. ಸ್ವಲ್ಪ ದಿನಗಳ ಬಳಿಕ ಸುಟ್ಟು ಕರಕಲಾಗಿದ್ದ ಆಲದ ಮರದ ಸೌದೆಯು ಅಲ್ಲಿಯೇ ಚಿಗುರೊಡೆದು ಬೆಳೆಯುತ್ತದೆ ಸೊಸೆಯು ಸತ್ಯವಂತೆ ಎಂದು ತಿಳಿದ ಅತ್ತೆ ಆಲದ ಮರಕ್ಕೆ ಪೂಜೆ ಸಲ್ಲಿಸಿ ಕ್ಷಮೆಯಾಚಿಸುತ್ತಾಳೆ.

ಗ್ರಾಮದಲ್ಲಿ ನಡೆದ ಸತ್ಯ ಘಟನೆಗೆ ಸಾಕ್ಷಿಯಾಗಿ ಇಂದಿಗೂ ಪುರಾತನ ಆಲದಮರವಿದ್ದು, ದಿನನಿತ್ಯ ಪೂಜಾ ಕೈಂಕರ್ಯಗಳು ನಡೆಯುತ್ತಿರುತ್ತವೆ. ಈ ಮರದ ಒಂದು ಎಲೆಯನ್ನೂ ಸಹಾ ಕೀಳುವಂತಿಲ್ಲ. ಇಲ್ಲಿ ಯಾವುದೇ ವಲಸು-ವಗ್ಯೆರೆ ಮಾಡುವಂತಿಲ್ಲ. ಈಗಲೂ ಸಹಾ ಮುಕ್ತಿದಾಯಿಕೆ ಆಲದಮರದಮ್ಮ ಗ್ರಾಮದ ಸೊಸೆಯರಿಗೆ ಯಾವುದೇ ಕೆಡುಕು ಹಾಗೂ ಕಂಟಕ ಬಾರದಂತೆ ಕಾಯುತ್ತಿದ್ದಾಳೆ ಎಂಬುದು ಗ್ರಾಮಸ್ಥರ ಬಲವಾದ ನಂಬಿಕೆಯಾಗಿದೆ.

# ಮರವಳಲು ಗ್ರಾಮದಲ್ಲಿ ಆರೋಗ್ಯ ಶಿಬಿರ




ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಅರಕಲಗೂಡು: ತಾಲ್ಲೂಕಿನ ಮರವಳಲು ಗ್ರಾಮದಲ್ಲಿ ಪಟ್ಟಣದ ಕ್ರಿಸ್ತಜ್ಯೋತಿ ಮತ್ತು ಬೈಚನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಎರಡು ದಿನಗಳ ಕಾಲ ರಕ್ತದಾನ ಹಾಗೂ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಮೊದಲ ದಿನ ನಡೆದ ರಕ್ತದಾನ ಶಿಬಿರದಲ್ಲಿ ವಿದ್ಯಾರ್ಥಿಗಳ ಪೋಷಕರು, ಗ್ರಾಮಸ್ಥರು ಹಾಗೂ ಶಾಲೆಯ ಶಿಕ್ಷಕರು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿದರು. ಗ್ರಾಮದ ದೇವಸ್ಥಾನ, ಶಾಲಾ ಆವರಣ, ಸಮುದಾಯ ಭವನ ಸೇರಿದಂತೆ ಇತರೆ ಜನವಸತಿ ಪ್ರದೇಶದಲ್ಲಿ ವಿದ್ಯಾರ್ಥಿಗಳು ಶ್ರಮದಾನ ಮೂಲಕ ಸ್ವಚ್ಛತಾ ಕಾರ್ಯ ಕೈಗೊಂಡರು. ಸಂಜೆ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿದ ಗ್ರಾಪಂ ಅಧ್ಯಕ್ಷೆ ಮಂಜಮ್ಮ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಆರೋಗ್ಯ ಶಿಬಿರ ನಡೆದಿರುವುದು ತುಂಬಾ ಸಂತೋಷವಾಗಿದೆ. ಇದರಿಂದ ಜನ ಸಾಮಾನ್ಯರಿಗೆ ಅನುಕೂಲವಾಗುತ್ತದೆ ಎಂದರು.

ಕ್ರಿಸ್ತಜ್ಯೋತಿ ಶಾಲೆ ಪ್ರಾಂಶುಪಾಲ ಪಿ.ಜೆ. ಸೆಬಾಸ್ಟೀಯನ್ ಮಾತನಾಡಿ, ನಮ್ಮ ಶಾಲೆ ವತಿಯಿಂದ ಸಮಾಜಮುಖಿ ಕಾರ್ಯಗಳನ್ನು ಸಹ ಕೈಗೊಳ್ಳಲಾಗುತ್ತಿದೆ. ಕೇವಲ ಶಿಕ್ಷಣ ನೀಡಲು ಸಂಸ್ಥೆ ಸೀಮಿತವಾಗಿಲ್ಲ. ನೊಂದವರು, ಬಡವರಿಗೆ ಆಸರೆಯಾಗಿ ಕೆಲಸ ಮಾಡುತ್ತಿದೆ. ನಮ್ಮ ಶಾಲೆ ಶಿಕ್ಷಕರು 40 ಯೂನಿಟ್ ರಕ್ತ ನೀಡಿದ್ದಾರೆ. ಮಕ್ಕಳು ಕೂಡ ಗ್ರಾಮದ ನೈರ್ಮಲ್ಯವನ್ನು ಕಾಪಾಡಿದ್ದಾರೆ. ಹೀಗೆ ಪ್ರತಿ ವರ್ಷವೂ ಒಂದೊಂದು ಗ್ರಾಮವನ್ನು ಆಯ್ಕೆಮಾಡಿಕೊಂಡು ಸೇವೆಯನ್ನು ನೀಡಲಾಗುತ್ತಿದೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾಗರಾಜ್, ಗ್ರಾಮದ ಮುಖಂಡ ಹನುಮೇಗೌಡ, ಶಾಲಾ ಶಿಕ್ಷಕರಾದ ಪುನೀತ್, ನಂಜೇಗೌಡ, ಸುಷ್ಮಾ, ಸವಿಶ್ರೀ ಭಾಗವಹಿಸಿದ್ದರು.

ಆರೋಗ್ಯ ಶಿಬಿರದಲ್ಲಿ ರಕ್ತಪರೀಕ್ಷೆ, ಗುಂಪು ಪರೀಕ್ಷೆ, ಜನರಲ್ ಮೆಡಿಸನ್, ಮಧುಮೇಹ ತಪಾಸಣೆ, ಕಣ್ಣಿನ ಪರೀಕ್ಷೆ, ಚಿಕಿತ್ಸೆ, ಇಸಿಜಿ, ಸ್ತ್ರೀರೋಗ ಮತ್ತು ಮೂಳೆ ತಜ್ಞರಿಂದ ಆರೋಗ್ಯ ತಪಾಸಣೆ ನಡೆಸಲಾಯಿತು.

# ಕ್ರೀಡಾ ಮನೋಭಾವ ಬೆಳೆಸಿಕೊಳ್ಳಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹೊಳೆನರಸೀಪುರ: ಜನಪದ ಸ್ತರಗಳಲ್ಲಿ ಗ್ರಾಮೀಣ ಕ್ರೀಡೆಯೂ ಒಂದಾಗಿದ್ದು, ಮಕ್ಕಳು ವಿವಿಧ ಪಂದ್ಯಾವಗಳಿಗಳಲ್ಲಿ ಭಾಗವಹಿಸಬೇಕು ಎಂದು ಪ್ರಾಂಶುಪಾಲ ಕೆ. ಗುರುರಾಜ್ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರಿಗೆ ನಡೆಸಿದ್ದ ಸಾಂಸ್ಕೃತಿಕ ಸ್ಪರ್ಧೆ ಮತ್ತು ಗ್ರಾಮೀಣ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ಚಿಕ್ಕಂದಿನಲ್ಲಿ ಆಡಿ, ನಲಿದ ಕ್ರೀಡೆಗಳು ನಮ್ಮ ಮುಂದಿನ ಪೀಳಿಗೆಗೂ ತಲುಪಿಸಲು ಮುಂದಾಗಬೇಕು. ಸೋಲು, ಗೆಲುವಿಗಿಂತ ಭಾಗವಹಿಸುವುದು ಮುಖ್ಯ ಎಂದರು.

ಕ್ರೀಡಾ ಸಂಯೋಜಕ ಎನ್. ತಿಪ್ಪೇಸ್ವಾಮಿ ಮಾತನಾಡಿ, ಸಾಂಸ್ಕೃತಿಕ ಸ್ಪರ್ಧೆಗಳು ಮನ ತಣಿಸುವುದರ ಜತೆಗೆ ಪ್ರತಿಭಾವಂತರನ್ನಾಗಿಸಲು ಸಹಕಾರಿಯಾಗುತ್ತದೆ. ಕ್ರೀಡಾ ಉತ್ಸಾಹದಿಂದ ದೈಹಿಕ ಮತ್ತು ಮನೋಬಲ ಸದೃಢಗೊಳ್ಳುತ್ತದೆ ಎಂದರು.

ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗಗಳಾಗಿ ಮಾಡಿ ಹಗ್ಗ ಜಗ್ಗಾಟ, ಕಬ್ಬಡಿ ಸೇರಿದಂತೆ ನಾನಾ ಕ್ರೀಡಾ ಪಂದ್ಯವಳಿ ನಡೆಸಲಾಯಿತು. ವ್ಯಕ್ತಿತ್ವದ ಆಂತರೀಕ ಗುಣಮಟ್ಟ ಹೆಚ್ಚಿಸಲು ಸಾಂಸ್ಕೃತಿಕ ಸ್ಪರ್ಧೆ ನಡೆಸಲಾಯಿತು.

# ಉತ್ತರದ ರಾಜ್ಯಗಳಲ್ಲಿ ಕನ್ನಡ ಪ್ರಚಾರ ಸಮಿತಿ ಸ್ಥಾಪಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕೇಂದ್ರ ಸರ್ಕಾರ ಹಿಂದಿಗೆ ನೀಡಿರುವ ಆದ್ಯತೆಯನ್ನು ಸ್ಥಳೀಯ ಭಾಷೆಗಳಿಗೂ ನೀಡಬೇಕು, ಎಲ್ಲ ರಾಜ್ಯಗಳಲ್ಲೂ ಹಿಂದಿ ಪ್ರಚಾರ ಸಮಿತಿ ಇರುವಂತೆ ಉತ್ತರದ ರಾಜ್ಯಗಳಲ್ಲಿ ದಕ್ಷಿಣ ರಾಜ್ಯಗಳ ಭಾಷೆಯ ಸಮಿತಿ ಸ್ಥಾಪಿಸಲಿ ಎಂದು ಹಿರಿಯ ಹೋರಾಟಗಾರ ಆರ್.ಪಿ. ವೆಂಕಟೇಶ್‌ಮೂರ್ತಿ ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ತಮಿಳುನಾಡು ಸರ್ಕಾರಕ್ಕೆ ತಾಕತ್ತಿದ್ದರೆ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ವಿದ್ಯಾಭ್ಯಾಸವನ್ನು ತಮಿಳು ಮಾಧ್ಯಮದಲ್ಲಿ ಮಾಡಿಸಲಿ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸವಾಲು ಹಾಕಿದ್ದಾರೆ. ಹಿಂದಿಯೇತರ ಭಾಷಿಕರೂ ಈ ಸವಾಲನ್ನು ಸ್ವೀಕರಿಸಿ ಕೇಂದ್ರಕ್ಕೆ ಬುದ್ದಿ ಕಲಿಸಬೇಕು. ದ್ವಿಭಾಷಾ ನೀತಿ ಪರವಾಗಿ ಕರ್ನಾಟಕದಲ್ಲಿ ಕೂಡ ಚರ್ಚೆ ಆರಂಭವಾಗಿದ್ದು, ಹಿಂದಿ ವಿರುದ್ಧದ ಹೋರಾಟದಲ್ಲಿ ಇಂಗ್ಲಿಷ್




ಭಾಷೆಯಿಂದ ದೇಶದ ಭಾಷೆಗಳಿಗೆ ಆಗುತ್ತಿರುವ ಹಾನಿಯ ಬಗ್ಗೆ ನಾವು ಎಚ್ಚರ ತಪ್ಪಬಾರದು ಎಂದು ಹೇಳಿದರು.

ಕನಿಷ್ಠ ಪ್ರಾಥಮಿಕ ಶಿಕ್ಷಣವಾದರೂ ಮಾತೃ ಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಆಗಬೇಕೆಂದು ಎಷ್ಟೇ ಹೋರಾಟ ನಡೆದರೂ, ಸಾಹಿತ್ಯ ಸಮ್ಮೇಳನಗಳಲ್ಲಿ ನಿರ್ಣಯ ಆಗುತ್ತಿದ್ದರೂ,

ಇಂಗ್ಲಿಷ್ ಮಾಧ್ಯಮದ ಪ್ರವಾಹದಲ್ಲಿ ದೇಶದ ಭಾಷೆಗಳು ಕೊಚ್ಚಿ ಹೋಗುತ್ತಿರುವುದನ್ನು ಕಂಡು ನಾವೆಲ್ಲ ಅಸಹಾಯಕರಾಗಿ ನೋಡುತ್ತಾ ನಿಲ್ಲುವ ಪರಿಸ್ಥಿತಿ ಬಂದಿದೆ.

ಪರಿಸ್ಥಿತಿ ಹೀಗೇ ಮುಂದುವರಿದರೆ ಕೆಲವೇ ವರ್ಷಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳಿಗೆ ಸೇರಿಸುವ ಒಬ್ಬನೇ ಪೋಷಕ ಕೂಡ ಸಿಗಲಾರದು ಎಂದು ಎಚ್ಚರಿಸಿದರು.

ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಮಾತ್ರವಲ್ಲದೆ, ಕೃಷಿ, ತೋಟಗಾರಿಕೆ, ಪಶು ವೈದ್ಯಕೀಯ, ಕಾನೂನು, ವಾಣಿಜ್ಯಶಾಸ್ತ್ರ ಹೀಗೆ ಬಹುತೇಕ ಎಲ್ಲ ಉನ್ನತ ವ್ಯಾಸಂಗ ವ್ಯವಸ್ಥೆ ಇಂಗ್ಲಿಷ್‌ನಲ್ಲಿರುವುದರಿಂದ, ಸಹಜವಾಗಿ ಪೋಷಕರು ಭವಿಷ್ಯದಲ್ಲಿ ತಮ್ಮ ಮಕ್ಕಳು ಕಷ್ಟಕ್ಕೆ ಸಿಲುಕಬಾರದೆಂದು ಪ್ರಾಥಮಿಕ ಹಂತದಲ್ಲಿಯೇ ಆಂಗ್ಲ ಮಾಧ್ಯಮ ಶಾಲೆಗಳಿಗೆ ಸೇರಿಸುವ ನಿರ್ಧಾರಕ್ಕೆ ಬರುವುದು ತಪ್ಪೆಂದು ಹೇಳಲು ಸಾಧ್ಯವೇ ಇಲ್ಲ ಎಂದು ಪ್ರತಿಪಾದಿಸಿದರು.

ಇಂತಹ ಸನ್ನಿವೇಶದಲ್ಲಿ ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮ ಇರಬೇಕೆಂದು ಹೇಳುವುದು ಕೇವಲ ಭಾವನಾತ್ಮಕ ಸಂಗತಿ ಆಗುತ್ತದೆಯೇ ಹೊರತು, ವಾಸ್ತವಕ್ಕೆ ಹತ್ತಿರ ಅನ್ನಿಸುವುದಿಲ್ಲ.

ಹಾಗಾಗಿ ಕನ್ನಡ ಸೇರಿದಂತೆ ದೇಶದ ಭಾಷೆಗಳು ಉಳಿಯಬೇಕಿದ್ದರೆ, ಉನ್ನತ ಶಿಕ್ಷಣ ದೇಶದ ಪ್ರಾದೇಶಿಕ ಭಾಷೆಗಳಲ್ಲಿ ಆಗಲೇಬೇಕು.

ಈ ಹಿನ್ನೆಲೆಯಲ್ಲಿ ಅಮಿತ್ ಶಾ ಅವರ ಹೇಳಿಕೆಯನ್ನು ಕರ್ನಾಟಕ ಸರ್ಕಾರ, ಕನ್ನಡಪರ ಹೋರಾಟಗಾರರು ಹಾಗೂ ಕನ್ನಡದ ಸಾಹಿತಿಗಳು ಸಕಾರಾತ್ಮಕವಾಗಿ ಸ್ವೀಕರಿಸಲೇಬೇಕು.

ಉನ್ನತ ಶಿಕ್ಷಣವನ್ನು ದೇಶದ ಭಾಷೆಗಳಲ್ಲಿ ನೀಡಲು ಸಾಧ್ಯವಿಲ್ಲ ಎನ್ನುವುದಾದರೆ, ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮ ಇರಬೇಕೆಂದು ಭಾಷಣ ಮಾಡುವುದು ಹಾಗೂ ಸಮ್ಮೇಳನಗಳಲ್ಲಿ ಠರಾವು ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ ಎಂದರು.

# ಇಂದು ವಿದ್ಯುತ್ ವ್ಯತ್ಯಯ

ಹಾಸನ: ಬೇಲೂರು ಉಪವಿಭಾಗದ ಹಳೇಬೀಡು ಶಾಖಾ ವ್ಯಾಪ್ತಿಗೆ ಒಳಪಡುವ, ಹಳೇಬೀಡು ವಿ.ವಿ ಕೇಂದ್ರದಿಂದ ಹೊರಹೊಮ್ಮುವ ಎಫ್-9 ಹಳೇಬೀಡು ಪಟ್ಟಣದಲ್ಲಿ ಪೂರಕದ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯವಾಗಲಿದೆ.

ಹಳೇಬೀಡು ಪಟ್ಟಣ, ಗೋಣಿಸೋಮನಹಳ್ಳಿ ಹಾಗೂ ಘಟ್ಟದಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಮಾ. 20ರ ಬೆಳಿಗ್ಗೆ 9 ರಿಂದ ಸಂಜೆ 6ರ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ. ಆಲೂರು ಕಾರ್ಯ ಮತ್ತು ಪಾಲನಾ ಉಪ ವಿಭಾಗ ವ್ಯಾಪ್ತಿಯ ಬಾಳ್ಳುಪೇಟೆ 66/11 ಕೆವಿ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಎಫ್-4 ಹೊಂಕರವಳ್ಳಿ ಫೀಡರ್ ನಿರ್ವಹಣೆ ಕಾಮಗಾರಿಯ ಕೈಗೊಂಡಿರುವುದರಿಂದ ಹೊಂಕರವಳ್ಳಿ, ಹಳೇ ಹೊಂಕರವಳ್ಳಿ, ಹೊಸಗದ್ದೆ, ಮಲಗಳಲೆ, ಬೋಸ್ಮಾನಹಳ್ಳಿ, ದೊಡ್ಡಬಾರೆ, ಹರಿಹಳ್ಳಿ, ನಾಗವಾರ, ಹಾಡ್ಯಕೊಪ್ಪಲು, ಬಿಗತ್ತೂರು, ಮಲ್ಲಾಪುರ, ಹೊಸಕೋಟೆ, ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಅನಿಯಮಿತವಾಗಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ತಿಳಿಸಿದೆ.

# ವಿವಿಧ ಹುದ್ದೆಗಳಿಗೆ ನೇರ ಸಂದರ್ಶನ ನಾಳೆ

ಹಾಸನ: ಆಲ್ಟ್ರಲ್ಯಾಬೋರೇಟರೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಿಂದ ನಗರದ ರೈಲ್ವೆ ನಿಲ್ದಾಣ ರಸ್ತೆಯಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮಾ. 21ರ ಬೆಳಿಗ್ಗ 10.30ಕ್ಕೆ ವಿವಿಧ ಹುದ್ದೆಗಳ ಭರ್ತಿಗೆ ನೇರ ಸಂದರ್ಶನ ನಡೆಯಲಿದೆ. ಎಸ್‌ಎಸ್‌ಎಲ್‌ಸಿ, ಐಟಿಐ, ಡಿಪ್ಲೊಮಾ, ಪಿಯುಸಿ, ಯಾವುದೇ ಪದವಿ, ಹಾಗೂ ಬಿ.ಎಸ್ಸಿ/ ಎಮ್‌ಎಸ್ಸಿ / ಬಿ.ಫಾರ್ಮ್ ಪಾಸಾದ ಪುರುಷ/ ಮಹಿಳಾ ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಬಹುದು. ಮಾಹಿತಿಗೆ 8722606874 ಇಲ್ಲಿಗೆ ಸಂಪರ್ಕಿಸಲು ತಿಳಿಸಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248